# ನವಿಲುಗನ್ನಡಿ

- ಮಯೂರ ಸೆಪ್ಟೆಂಬರ್ ಸಂಚಿಕೆ ನಿಜಕ್ಕೂ ಸುಂದರವಾಗಿದೆ. ಇಡೀ ಪುಸ್ತಕವೇ ಒಂದು ಮೋಹಕ ಕಾವ್ಯದಂತಿದೆ. ವಸ್ತು ವೈವಿಧ್ಯದಲ್ಲೂ ಅಚ್ಚುಕಟ್ಟು. ಸಾಹಿತ್ಯಾಸಕ್ತರಿಗೆ ಒಂದು ವರ್ಷದ ಮಯೂರವನ್ನು ಕೊಡುಗೆಯಾಗಿ ಕೊಡಬಹುದು.

**ಬಿ.ಎನ್. ಮಲ್ಲೇಶ್, ದಾವಣಗೆರೆ**

- ಸೆಪ್ಟೆಂಬರ್ ಸಂಚಿಕೆಯ ಮುಖಪುಟ ಮುದ್ದಾಗಿದೆ. ತಾನೊಂದು ಬ್ರಾಂಡ್ ಎಂದು ಹೇಳಿಕೊಳ್ಳುವ ಕವಯಿತ್ರಿ, ಕಲಾವಿದೆ ಶಿಲೋಕ್ ಜತೆಗಿನ ಸಂವಾದ ತೇಜೋಹಾರಿ. ಕಲೆಯ ಮೂಲಕ ಮನಸುಗಳನ್ನು ಬೆಸೆಯುವ ಕೆಲಸ ಮಾಡುತ್ತಿರುವ ಕಲಾವಿದೆಯ ಮಾತುಗಳು ಮೌಲಿಕವಾಗಿವೆ.

**ಶಂಕರನಾರಾಯಣ ಭಟ್, ಹೊನ್ನಾವರ,**
**ಧ್ರುವ ಪಾಟೀಲ್, ಹಂಪಿ**

- ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಲೇಖನ 'ಗಿರೀಶ ಕಾರ್ನಾಡ: ಕೆಲವು ಕಪ್ಪು–ಬಿಳುಪು ಚಿತ್ರಗಳು' ಕಾರ್ನಾಡರ ಬದುಕು ಬರಹಗಳ ಸಮಗ್ರ ಮಾಹಿತಿಯನ್ನು ನೀಡುತ್ತದೆ.

**ಸೇತುರಾವ್ ಕುಲಕರ್ಣಿ, ಬೆಂಗಳೂರು**
**ಕನಕಪ್ಪ ವಾಗನಗೇರಿ**

- ವಿಷಯ ವೈವಿಧ್ಯದಿಂದ ಕೂಡಿದ ಈ ಸಂಚಿಕೆ ಮನಸೂರೆಗೊಂಡಿತು. ಗಿರೀಶ ಕಾರ್ನಾಡರ ಕುರಿತು ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ ಬರಹ ಸೊಗಸಾಗಿದೆ. ಬಹುಮುಖ ಪ್ರತಿಭೆ ಶಿಲೋಕ್ ಮುಕ್ಕಾಟಿ ಅವರ ಮಾತುಗಳು ಮನನೀಯವಾಗಿವೆ. ಕೇಶವರೆಡ್ಡಿ ಹಂದ್ರಾಳರ ಕಥೆ ಸರಸರ ಓದಿಸಿಕೊಂಡು ಹೋಯಿತು. 'ಅಸ್ವಸ್ಥತೆ' (ಮೂಲ: ಆಂಟನ್ ಚೆಕಾವ್ ಕನ್ನಡಕ್ಕೆ: ನಾಗರೇಖಾ ಗಾಂವಕರ) ಚೆನ್ನಾಗಿದೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**

- ಕೇಶವರೆಡ್ಡಿ ಹಂದ್ರಾಳರ 'ಸತ್ಯ ಡಿಕ್ಯಾಸ್ಟ್ರೊನ ಅಪೂರ್ಣ ಉಯಿಲು', ಪ್ರೇಮಕುಮಾರ್ ಹರಿಯಬ್ಬೆಯವರ 'ನಾಟಕೀಯ' ಹಾಗೂ 'ಕೊಲೆಗಡುಕ' (ಮೂಲ: ಜೀನ್ ಪಾಲ್ ಸಾರ್ತ್ರೆ ಕನ್ನಡಕ್ಕೆ : ಆರ್. ಲಕ್ಷ್ಮೀನಾರಾಯಣ) ಕಥೆಗಳು ಮನಸನ್ನು ತೀವ್ರವಾಗಿ ಸೆರೆಹಿಡಿದವು.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**




- ತುರುವೇಕೆರೆ ರವಿಶಂಕರರ ಲಘು ಬರಹ 'ಗಾಳಿಯನ್ನು ತಡೆಯೋರು ಯಾರೂ ಇಲ್ಲ' ಅಪಾನವಾಯುವಿನ ಹೊರಹಾಕುವಿಕೆ ಮತ್ತು ಅದರಿಂದ ಉಂಟಾಗುವ ಮುಜುಗರದ ಸನ್ನಿವೇಶವನ್ನು ಸೊಗಸಾಗಿ ಚಿತ್ರಿಸಿದೆ.

**ನಾಗರೇಖಾ ಬಿರಾದಾರ, ಬಾಗಲಕೋಟೆ**

- ನಂದಾದೀಪದಲ್ಲಿನ ಎರಡೂ ಲೇಖನಗಳು ಚೆನ್ನಾಗಿವೆ. ಜಿ.ರಾಜಶೇಖರ ಅವರ ಮಾನವೀಯ ಪ್ರಜ್ಞೆ ಮತ್ತು ಬದ್ಧತೆ ಅನುಕರಣೀಯ. ಪಠಣ ಕುತೂಹಲ ಮತ್ತು ಇಮೋಜಿ ಭಾಷೆ ಅಂಕಣಗಳು ಮಾಹಿತಿಪೂರ್ಣವಾಗಿರುತ್ತವೆ.

**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**